B

CCE RF
CCE RR
Revised & Unrevised

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

KARNATAKA SECONDARY EDUCATION EXAMINATION BOARD, MALLESWARAM, BANGALORE – 560 003

ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2020

S. S. L. C. EXAMINATION, MARCH / APRIL, 2020

ಮಾದರಿ ಉತ್ತರಗಳು

MODEL ANSWERS

ದಿನಾಂಕ : 30. 03. 2020] **ಸಂಕೇತ ಸಂಖ್ಯೆ : 98-K**

Date : 30. 03. 2020] **CODE NO. : 98-K**

ವಿಷಯ : ಕರ್ನಾಟಕ ಸಂಗೀತ / ಹಿಂದೂಸ್ಥಾನಿ ಸಂಗೀತ — ಶಾಸ್ತ್ರ ವಿಭಾಗ

Subject : CARNATIC MUSIC / HINDUSTANI MUSIC — THEORY

(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)

(ಕನ್ನಡ ಭಾಷಾಂತರ / Kannada Version)

(ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು)

[ಗರಿಷ್ಠ ಅಂಕಗಳು : 40

[Max. Marks : 40

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	(ಕರ್ನಾಟಕ ಸಂಗೀತ)	
I.	**ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** $8 \times 1 = 8$	
1.	ಈಗ ಬಳಕೆಯಲ್ಲಿಲ್ಲದ ಗಂಧರ್ವಗಾನ (A) ಭಕ್ತಿ ಸಂಗೀತ (B) ಮಾರ್ಗ ಸಂಗೀತ (C) ದೇಶೀ ಸಂಗೀತ (D) ಸುಗಮ ಸಂಗೀತ ***ಉತ್ತರ :*** (B) ಮಾರ್ಗ ಸಂಗೀತ	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
2.	ಅನ್ಯಸ್ವರ ಹೊಂದಿರುವ ರಾಗ (A) ಉಪಾಂಗ ರಾಗ (B) ಸಂಪೂರ್ಣ ರಾಗ (C) ಜನಕ ರಾಗ (D) ಭಾಷಾಂಗ ರಾಗ ***ಉತ್ತರ :*** (D) ಭಾಷಾಂಗ ರಾಗ	1
3.	ಸ್ವರಗಳು ಎರಡೆರಡು ಜೋಡಿಯಾಗಿ ಬರುವ ಸ್ವರಾವಳಿಯೇ (A) ಸರಳೆ ವರಸೆ (B) ದಾಟು ವರಸೆ (C) ಜಂಟಿ ವರಸೆ (D) ತಗ್ಗುಸ್ಥಾಯಿ ವರಸೆ ***ಉತ್ತರ :*** (C) ಜಂಟಿ ವರಸೆ	1
4.	ಕರ್ನಾಟಕ ಹಾಗೂ ಹಿಂದೂಸ್ಥಾನಿ ಸಂಗೀತ ಪದ್ಧತಿಗಳಲ್ಲಿ ಕಂಡುಬರುವ ಒಂದು ಸಾಮ್ಯತೆ (A) ಸಪ್ತಸ್ವರಗಳು (B) ಸಪ್ತತಾಳಗಳು (C) ರಚನೆಗಳು (D) ವಾದ್ಯಗಳು ***ಉತ್ತರ :*** (A) ಸಪ್ತಸ್ವರಗಳು	1
5.	ಮಿಶ್ರ ಜಾತಿ ಝಂಪೆ ತಾಳದಲ್ಲಿ ಹತ್ತು ಅಕ್ಷರಗಳಿವೆ. ಏಕೆಂದರೆ ಈ ತಾಳದ ಲಘುವಿನಲ್ಲಿ (A) ನಾಲ್ಕು ಅಕ್ಷರಗಳಿವೆ (B) ಐದು ಅಕ್ಷರಗಳಿವೆ (C) ಏಳು ಅಕ್ಷರಗಳಿವೆ (D) ಒಂಭತ್ತು ಅಕ್ಷರಗಳಿವೆ ***ಉತ್ತರ :*** (C) ಏಳು ಅಕ್ಷರಗಳಿವೆ	1
6.	ಕೃತಿ ಮತ್ತು ಕೀರ್ತನೆಗಳ ನಡುವೆ ಇರುವ ಒಂದು ಸಾಮ್ಯತೆ (A) ಚಿಟ್ಟೆಸ್ವರ (B) ಪಲ್ಲವಿ–ಅನುಪಲ್ಲವಿ (C) ಧಾತು (D) ಸಂಗತಿ ***ಉತ್ತರ :*** (B) ಪಲ್ಲವಿ–ಅನುಪಲ್ಲವಿ	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
7.	ತ್ಯಾಗರಾಜರ ಕೃತಿರಚನಾ ಶೈಲಿಯನ್ನು ದ್ರಾಕ್ಷಾಪಾಕಕ್ಕೆ ಹೋಲಿಸಲಾಗಿದೆ. ಏಕೆಂದರೆ ಅವರ ರಚನೆಗಳು	
	(A) ಹೆಚ್ಚು ಸಂಗತಿಗಳನ್ನು ಹೊಂದಿವೆ (B) ಸರಳ ಹಾಗೂ ಸಾರಭರಿತವಾಗಿವೆ	
	(C) ಕ್ಲಿಷ್ಟವಾಗಿವೆ (D) ಸಂಸ್ಕೃತದಲ್ಲಿವೆ	
	ಉತ್ತರ : (B) ಸರಳ ಹಾಗೂ ಸಾರಭರಿತವಾಗಿವೆ	1
8.	ವೀಣೆಯು ಒಂದು ತತವಾದ್ಯವೆಂದು ಕರೆಯಲು ಕಾರಣ ಅದು	
	(A) ಮರದಿಂದ ಮಾಡಲ್ಪಟ್ಟಿದೆ (B) ಪ್ರಧಾನ ವಾದ್ಯವಾಗಿದೆ	
	(C) ಕರ್ನಾಟಕ ಸಂಗೀತ ವಾದ್ಯವಾಗಿದೆ (D) ತಂತಿಗಳಿಂದ ನಾದೋತ್ಪತ್ತಿ ಮಾಡುತ್ತದೆ	
	ಉತ್ತರ : (D) ತಂತಿಗಳಿಂದ ನಾದೋತ್ಪತ್ತಿ ಮಾಡುತ್ತದೆ	1
II.	**ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು :** $8 \times 1 = 8$	
9.	ಕರ್ನಾಟಕ ಸಂಗೀತ ಪದ್ಧತಿಯಲ್ಲಿ ಎಷ್ಟು ಮೇಳಕರ್ತರಾಗಗಳಿವೆ ?	
	ಉತ್ತರ :	
	ಕರ್ನಾಟಕ ಸಂಗೀತ ಪದ್ಧತಿಯಲ್ಲಿ 72 ಮೇಳಕರ್ತ ರಾಗಗಳಿವೆ.	1
10.	ಪ್ರಕೃತಿ ಸ್ವರಗಳಾವುವು ?	
	ಉತ್ತರ :	
	ಷಡ್ಜ (ಸ) ಮತ್ತು ಪಂಚಮ (ಪ) ಸ್ವರಗಳು ಪ್ರಕೃತಿ ಸ್ವರಗಳು	1
11.	ಝಂಪೆ ತಾಳದ ಅಂಗಗಳನ್ನು (ತಾಳಾಂಗ) ಬರೆಯಿರಿ.	
	ಉತ್ತರ :	
	ಝಂಪೆ ತಾಳದ ಅಂಗಗಳು	
	1 ಲಘು 1 ಅನುಧೃತ 1 ಧೃತ	
	ಅಥವಾ	
	1 UO	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
12.	ಶಾಮಾಶಾಸ್ತ್ರಿಗಳ 'ಆರಾಧ್ಯದೈವ' ಯಾರು ?	
	ಉತ್ತರ :	
	ಶಾಮಾಶಾಸ್ತ್ರಿಗಳ ಆರಾಧ್ಯದೈವ 'ಬಂಗಾರು ಕಾಮಾಕ್ಷಿ'	1
13.	ಅವನದ್ಧ ವಾದ್ಯಗಳೆಂದರೇನು ?	
	ಉತ್ತರ :	
	ಚರ್ಮದಿಂದ ಎಳೆದು ಕಟ್ಟಿ ಮಾಡಿರುವ ವಾದ್ಯಗಳು ಅವನದ್ಧ ವಾದ್ಯಗಳು.	
	ಅಥವಾ	
	ತಾಳವಾದ್ಯಗಳೇ ಅವನದ್ಧ ವಾದ್ಯಗಳು	1
14.	ತಾರಸ್ಥಾಯಿ ಸ್ವರಗಳನ್ನು ಸಂಗೀತ ಲಿಪಿಯಲ್ಲಿ ಹೇಗೆ ಗುರುತಿಸುವಿರಿ ?	
	ಉತ್ತರ :	
	ತಾರಸ್ಥಾಯಿ ಸ್ವರಗಳನ್ನು ಸ್ವರಗಳ ಮೇಲೆ ಚುಕ್ಕಿ ಇಡುವುದರ ಮೂಲಕ ಗುರುತಿಸುತ್ತೇವೆ.	
	ಸ ರಿ ಗ ಮ ಪ ದ ನಿ $\underbrace{\text{ಸೆ ರೆ ಗೆ ಮೆ}}$ ತಾರಸ್ಥಾಯಿ ಸ್ವರಗಳು	
	ಸೆ ರೆ ಗೆ ಮೆ ತಾರಸ್ಥಾಯಿ ಸ್ವರಗಳು	1
15.	ಔಡವ ರಾಗಕ್ಕೂ ಮತ್ತು ಷಾಡವ ರಾಗಕ್ಕೂ ಇರುವ ಒಂದು ವ್ಯತ್ಯಾಸವನ್ನು ತಿಳಿಸಿ.	
	ಉತ್ತರ :	
	ಔಡವ ರಾಗವು ಆರೋಹಣ, ಅವರೋಹಣಗಳಲ್ಲಿ 5–5 ಸ್ವರಗಳನ್ನು ಹೊಂದಿದ್ದರೆ ಷಾಡವ ರಾಗವು 6–6 ಸ್ವರಗಳನ್ನು ಹೊಂದಿರುತ್ತವೆ.	1
16.	ಮಾಯಾಮಾಳವಗೌಳ ಒಂದು ಸಂಪೂರ್ಣ ರಾಗ. ಏಕೆ ?	
	ಉತ್ತರ :	
	ಮಾಯಾಮಾಳವಗೌಳ ರಾಗವು ಆರೋಹಣ ಮತ್ತು ಅವರೋಹಣಗಳಲ್ಲಿ ಏಳು ಸ್ವರಗಳನ್ನು (ಸಪ್ತಸ್ವರಗಳು) ಹೊಂದಿರುವುದರಿಂದ ಸಂಪೂರ್ಣ ರಾಗವೆನಿಸಿದೆ.	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು

III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** $7 \times 2 = 14$

17. ಕರ್ನಾಟಕ ಸಂಗೀತ ಹಾಗೂ ಹಿಂದೂಸ್ಥಾನಿ ಸಂಗೀತ ಪದ್ಧತಿಗಳ ನಡುವಿನ ಎರಡು ವ್ಯತ್ಯಾಸಗಳನ್ನು ತಿಳಿಸಿ.

ಉತ್ತರ :

ಕರ್ನಾಟಕ ಸಂಗೀತ	*ಹಿಂದೂಸ್ಥಾನಿ ಸಂಗೀತ*
i) ಈ ಪದ್ಧತಿಯಲ್ಲಿ ಒಂದು ಸ್ಥಾಯಿಯಲ್ಲಿ 16 ಸ್ವರಗಳಿವೆ	i) ಈ ಪದ್ಧತಿಯಲ್ಲಿ ಒಂದು ಸ್ಥಾಯಿಯಲ್ಲಿ 12 ಸ್ವರಗಳಿವೆ
ii) ರಾಗ ವಿಭಜನೆಯಲ್ಲಿ ಜನಕ ಮತ್ತು ಜನ್ಯರಾಗ ಪದ್ಧತಿಯನ್ನು ಹೊಂದಿದೆ	ii) ರಾಗ ವಿಭಜನೆಯಲ್ಲಿ ರಾಗ–ರಾಗಿಣಿ ಮತ್ತು ಥಾಟ್ ಪದ್ಧತಿಯನ್ನು ಹೊಂದಿದೆ

2

18. ಮೊದಲನೆಯ ಸರಳೆಯ ಎರಡನೆಯ ಕಾಲ ಮತ್ತು ಮೂರನೆಯ ಕಾಲವನ್ನು ಸ್ವರಲಿಪಿಯಲ್ಲಿ ತೋರಿಸಿ.

ಉತ್ತರ :

ಮೊದಲನೆಯ ಸರಳೆ : ಸ ರಿ ಗ ಮ | ಪ ದ | ನಿ ಸಂ ||

ಸಂ ನಿ ದ ಪ | ಮ ಗ | ರಿ ಸ ||

ಎರಡನೆಯ ಕಾಲ : ಸ ರಿ ಗ ಮ ಪ ದ ನಿ ಸಂ |

ಸ ನಿ ದ ಪ | ಮ ಗ ರಿ ಸ ||

ಮೂರನೆಯ ಕಾಲ : ಸ ರಿ ಗ ಮ ಪ ದ ನಿ ಸಂ ಸಂ ನಿ ದ ಪ ಮ ಗ ರಿ ಸ |

ಸ ರಿ ಗ ಮ ಪ ದ ನಿ ಸಂ | ಸಂ ನಿ ದ ಪ ಮ ಗ ರಿ ಸ ||

2

19. ಅಕ್ಕಮಹಾದೇವಿಯು ತನ್ನ ಪತಿಯನ್ನು ತ್ಯಜಿಸಲು ಕಾರಣವೇನು ?

ಉತ್ತರ :

ಅಕ್ಕಮಹಾದೇವಿಯು ಹಾಕಿದ್ದ ಷರತ್ತುಗಳನ್ನು ಪತಿಯಾದ ರಾಜಾಕೌಶಿಕನು ಉಲ್ಲಂಘಿಸಿದ್ದರಿಂದ ಅವಳು ತನ್ನ ಪತಿಯನ್ನು ತ್ಯಜಿಸಿದಳು.

2

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು

20. ಕೊಳಲು ಒಂದು ಸುಷಿರ ವಾದ್ಯ. ಏಕೆ ?

ಉತ್ತರ :

ಕೊಳಲು ಗಾಳಿಯಿಂದ ನಾದೋತ್ಪತ್ತಿ ಮಾಡುವ ವಾದ್ಯವಾಗಿರುವುದರಿಂದ ಅದನ್ನು ಸುಷಿರವಾದ್ಯವೆನ್ನುವರು. 2

21. ಮೇಚಕಲ್ಯಾಣಿ ರಾಗವು ಧೀರ ಶಂಕರಾಭರಣ ರಾಗದಿಂದ ಹೇಗೆ ಭಿನ್ನವಾಗಿದೆ ?

ಉತ್ತರ :

ಮೇಚಕಲ್ಯಾಣಿ ರಾಗವು ತನ್ನ ಎಲ್ಲ ಸ್ವರಗಳಲ್ಲಿ ಧೀರ ಶಂಕರಾಭರಣವನ್ನು ಹೋಲಿದರೂ ಮಧ್ಯಮದಲ್ಲಿ ಭಿನ್ನತೆಯನ್ನು ಹೊಂದಿದೆ. ಮೇಚಕಲ್ಯಾಣಿ ರಾಗವು ಪ್ರತಿಮಧ್ಯಮವನ್ನು ಹೊಂದಿದೆ. ಧೀರಶಂಕರಾಭರಣವು ಶುದ್ಧ ಮಧ್ಯಮವನ್ನು ಹೊಂದಿದೆ. 2

22. ಕೆಳಗಿನ ವಾದ್ಯಗಳನ್ನು ತತ, ಸುಷಿರ, ಅವನದ್ಧ ಮತ್ತು ಘನವಾದ್ಯಗಳಾಗಿ ವಿಂಗಡಿಸಿ ಬರೆಯಿರಿ :

(i) ಮೃದಂಗ (ii) ಪಿಟೀಲು

(iii) ಘಟಂ (iv) ಹಾರ್ಮೋನಿಯಂ

ಉತ್ತರ :

ತತ	***ಸುಷಿರ***	***ಅವನದ್ಧ***	***ಘನ***
ಪಿಟೀಲು	ಹಾರ್ಮೋನಿಯಂ	ಮೃದಂಗ	ಘಟಂ

2

23. ಕೃತಿಯು ಕೀರ್ತನೆಗಿಂತ ಹೇಗೆ ಭಿನ್ನವಾಗಿದೆ ?

ಉತ್ತರ :

ಕೃತಿ	***ಕೀರ್ತನೆ***
i) ಸಂಗೀತ ಪ್ರಧಾನವಾದ ರಚನೆ	i) ಸಾಹಿತ್ಯ ಪ್ರಧಾನವಾದ ರಚನೆ
ii) ಕೆಲವು ಕೃತಿಗಳಲ್ಲಿ 'ಚಿಟ್ಟೆಸ್ವರ' ಎಂಬ ವಿಶೇಷ ಭಾಗ ಅಧಿಕೃತವಾಗಿರುತ್ತದೆ	ii) ಚಿಟ್ಟೆಸ್ವರ ಅಧಿಕೃತವಾಗಿ ಇರುವುದಿಲ್ಲ
iii) ಹೆಚ್ಚು ಸಂಗತಿಗಳಿರುತ್ತವೆ	iii) ಹೆಚ್ಚು ಸಂಗತಿಗಳಿರುವುದಿಲ್ಲ
iv) ವಿವಿಧ ತಾಳಗಳಲ್ಲೂ ಸಮ, ವಿಷಮ, ಗ್ರಹಗಳಲ್ಲೂ ರಚಿತವಾಗಿವೆ	iv) ಹೆಚ್ಚಾಗಿ ಆದಿತಾಳ, ಛಾಪುತಾಳಗಳಲ್ಲಿ ರಚಿತವಾಗಿದೆ
v) ರಾಗದ ನಿಬಂಧನೆ ಇರುತ್ತದೆ	v) ಯಾವ ರಾಗದಲ್ಲೂ ಹಾಡಬಹುದು
vi) ತೆಲುಗು, ಸಂಸ್ಕೃತ, ತಮಿಳು, ಮಲಯಾಳಂ, ಕನ್ನಡ ಭಾಷೆಗಳಲ್ಲಿ ರಚಿತವಾಗಿದೆ	vi) ಹೆಚ್ಚಾಗಿ ಕನ್ನಡದಲ್ಲಿವೆ

(ಯಾವುದಾದರೂ ಎರಡು ವ್ಯತ್ಯಾಸಗಳನ್ನು ಪರಿಗಣಿಸುವುದು) 2

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
IV.	**ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**	
24.	ಚತುರಶ್ರಜಾತಿ ರೂಪಕತಾಳದ ಅಲಂಕಾರವನ್ನು ಸ್ವರಲಿಪಿಯಲ್ಲಿ ವಿನ್ಯಾಸಗೊಳಿಸಿ ಬರೆಯಿರಿ.	
	ಉತ್ತರ :	
	ತಾಳ : ಚತುರಶ್ರ ಜಾತಿ ರೂಪಕ ತಾಳ	
	ತಾಳಾಂಗ : 1 ಧ್ರುತ, 1 ಲಘು	
	ಚಿಹ್ನೆ : O |	
	ಅಕ್ಷರಗಳು : 2 + 4 = 6	
	O |	
	|| ಸ ರಿ | ಸ ರಿ ಗ ಮ ||	
	|| ರಿ ಗ | ರಿ ಗ ಮ ಪ ||	
	|| ಗ ಮ | ಗ ಮ ಪ ದ ||	
	|| ಮ ಪ | ಮ ಪ ದ ನಿ ||	
	|| ಪ ದ | ಪ ದ ನಿ ಸಂ ||	
	|| ಸಂ ನಿ | ಸಂ ನಿ ದ ಪ ||	
	|| ನಿ ದ | ನಿ ದ ಪ ಮ ||	
	|| ದ ಪ | ದ ಪ ಮ ಗ ||	
	|| ಪ ಮ | ಪ ಮ ಗ ರಿ ||	
	|| ಮ ಗ | ಮ ಗ ರಿ ಸ ||	4

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
25.	ಸಂಗೀತದ ಉಗಮವು ಪ್ರಕೃತಿಯೊಂದಿಗೆ ಹೊಂದಿರುವ ಸಂಬಂಧವನ್ನು ವಿವರಿಸಿ. ***ಉತ್ತರ :*** ಪ್ರಕೃತಿಯ ಅನುಕರಣೆಯು ಲಲಿತಕಲೆಗಳಲ್ಲಿರುತ್ತದೆ. ಮಾನವನಿಗೆ ಸಂಗೀತದ ಮೊದಲ ಗುರು ಪ್ರಕೃತಿ. ಹಕ್ಕಿಗಳ ಚಿಲಿಪಿಲಿ ನಾದ, ಮರಗಳ ಚರಪರ ಶಬ್ದ, ನದಿ ನೀರಿನ ಝುಳುಝುಳು ನಾದಕ್ಕೆ ಮನಸೋತು ಮಾನವ ಗುನುಗುನಿಸುತ್ತಾ ಅದರ ಲಯವನ್ನು ಅನುಸರಿಸತೊಡಗಿದ ನಂತರ ತನ್ನದೇ ಆದ ಭಾಷೆಯನ್ನು ಅಳವಡಿಸಿ ಚಪ್ಪಾಳೆಯನ್ನು ತಾಳ ಮಾಡಿಕೊಂಡು ಹಾಡತೊಡಗಿದ. ಹೀಗೆ ಸಂಗೀತದ ಉಗಮವು ಪ್ರಕೃತಿಯೊಂದಿಗೆ ಸಂಬಂಧವನ್ನು ಹೊಂದಿದೆ.	6

(ಹಿಂದೂಸ್ಥಾನಿ ಸಂಗೀತ)

I. **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** 8 × 1 = 8

1. ಭೀಮಸೇನ ಜೋಷಿಯವರು 'ಭಾರತರತ್ನ' ಪ್ರಶಸ್ತಿ ಪಡೆದ ಪ್ರಸಿದ್ಧ

(A) ಕರ್ನಾಟಕ ಸಂಗೀತಗಾರರು (B) ಜನಪದ ಸಂಗೀತಗಾರರು

(C) ಹಿಂದೂಸ್ಥಾನಿಶಾಸ್ತ್ರೀಯ ಸಂಗೀತಗಾರರು (D) ನಾಟಕಕಾರರು

ಉತ್ತರ : (C) ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತಗಾರರು 1

2. ಕರ್ನಾಟಕ ಸಂಗೀತವನ್ನು ದಕ್ಷಿಣಾದಿ ಸಂಗೀತ ಎಂದು ಕರೆಯುತ್ತಾರೆ. ಏಕೆಂದರೆ,

(A) ಈ ಸಂಗೀತ ಪ್ರಕಾರವು ದಕ್ಷಿಣ ಭಾರತದಲ್ಲಿ ಬೆಳೆದು ಬಂತು

(B) ಈ ಸಂಗೀತ ಪ್ರಕಾರವು ಕರ್ನಾಟಕದಲ್ಲಿ ಬೆಳೆದು ಬಂತು

(C) ಈ ಸಂಗೀತವು ಉತ್ತರ ಭಾರತದಲ್ಲಿ ಬೆಳೆದು ಬಂತು

(D) ಈ ಸಂಗೀತವು ಪ್ರಪಂಚದ ದಕ್ಷಿಣ ಭಾಗದಲ್ಲೆಲ್ಲ ರೂಢಿಯಲ್ಲಿದೆ

ಉತ್ತರ : (A) ಈ ಸಂಗೀತ ಪ್ರಕಾರವು ದಕ್ಷಿಣ ಭಾರತದಲ್ಲಿ ಬೆಳೆದು ಬಂತು 1

3. ರಾಗಗಳ ವರ್ಗೀಕರಣಕ್ಕೆ ಅನುಕೂಲವಾಗುವ ಜನಕ ರಾಗವೇ

(A) ಥಾಟ್ ರಾಗ (B) ವಕ್ರ ರಾಗ

(C) ರಾಗಿಣಿ ರಾಗ (D) ಔಡವ-ಔಡವ ರಾಗ

ಉತ್ತರ : (A) ಥಾಟ್ ರಾಗ 1

4. ಭೂಪ್ ರಾಗದ ಪಕ್ಕಡ್ ಸ್ವರ

(A) ಮ<u>ಗ</u>, ಮ<u>ಧನಿಧ</u>, ಮ<u>ಗ</u>ಸ (B) ಗರೆ ಪಗರೆ, ಗರೆಸಧಸ

(C) <u>ಧ</u>ಪ ಗಪ ಗ<u>ರೆ</u> (D) <u>ನಿ</u> ಪ ಮ ರೆ ನಿ ಸ

ಉತ್ತರ : (B) ಗರೆ ಪಗರೆ, ಗರೆಸಧಸ 1

5. ಪಟ್‌ದೀಪ್ ರಾಗದ ಶುದ್ಧ ನಿಷಾದವು ಕೋಮಲ ನಿಷಾದವಾದರೆ ಆಗುವ ರಾಗ

(A) ಭೀಮ ಪಲಾಸ್ (B) ಭಾಗೇಶ್ರೀ

(C) ಕಾಫಿ (D) ಬೃಂದಾವನಿ ಸಾರಂಗ

ಉತ್ತರ : (A) ಭೀಮ ಪಲಾಸ್ 1

6. ಸ್ವರಲಿಪಿಯಲ್ಲಿ ಮದ್ಯಮದ ಮೇಲೆ ಒಂದು ಚಿಕ್ಕ ಲಂಬಗೆರೆ ಕೊಡಲಾಗುವುದು ಏಕೆಂದರೆ ಅದು

(A) ಶುದ್ಧ ಮಧ್ಯಮ (B) ತೀವ್ರ ಮಧ್ಯಮ

(C) ಮೀಂಡ್ ಸ್ವರ (D) ಕಣ್ ಸ್ವರ

ಉತ್ತರ : (B) ತೀವ್ರ ಮಧ್ಯಮ 1

7. ಅವನದ್ಧ ವಾದ್ಯ ಎಂದರೆ

(A) ಮರ್ಧನ ವಾದ್ಯ (B) ತಂತಿ ವಾದ್ಯ

(C) ಸುಷಿರ ವಾದ್ಯ (D) ಘನ ವಾದ್ಯ

ಉತ್ತರ : (A) ಮರ್ಧನ ವಾದ್ಯ 1

8. ಸಂಗೀತದ ಕಲಿಕಾರ್ಥಿಗಳು ಸ್ವರಾಭ್ಯಾಸಗಳನ್ನು ಮಾಡಬೇಕು ಏಕೆಂದರೆ ಇದು

(A) ಶಾರೀರಿಕ ಶಾರೀರಿಕ ಬೆಳವಣಿಗೆಯನ್ನುಂಟು ಮಾಡುತ್ತದೆ

(B) ಸ್ವರಸ್ಥಾನ ಮತ್ತು ಸ್ವರ ಜ್ಞಾನವನ್ನು ಬೆಳೆಸುತ್ತದೆ

(C) ಸಂಗೀತಾಭ್ಯಾಸಕ್ಕೆ ಪೂರಕವಾಗಿದೆ

(D) ಮನೋರೋಗಿಗಳ ಕಾಯಿಲೆಗಳನ್ನು ಗುಣಮುಖಗೊಳಿಸುತ್ತದೆ

ಉತ್ತರ : (B) ಸ್ವರಸ್ಥಾನ ಮತ್ತು ಸ್ವರ ಜ್ಞಾನವನ್ನು ಬೆಳೆಸುತ್ತದೆ 1

II. **ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು :** $8 \times 1 = 8$

9. ಭಾರತೀಯ ಶಾಸ್ತ್ರೀಯ ಸಂಗೀತ ಪದ್ಧತಿಗಳೆರಡರಲ್ಲೂ ಬಳಸಲಾಗುವ ಶೃತಿ ವಾದ್ಯವನ್ನು ಹೆಸರಿಸಿ.

ಉತ್ತರ :

ಭಾರತೀಯ ಶಾಸ್ತ್ರೀಯ ಸಂಗೀತ ಪದ್ಧತಿಗಳೆರಡರಲ್ಲೂ ಬಳಸಲಾಗುವ ಶೃತಿ ವಾದ್ಯ ತಂಬೂರಿ. 1

10. 'ಶಹನಾಯ್' ಅನ್ನು ಸುಷಿರ ವಾದ್ಯವೆಂದು ಕರೆಯಲು ಕಾರಣವೇನು ?

ಉತ್ತರ :

ಗಾಳಿಯ ಸಹಾಯದಿಂದ ಸ್ವರೋತ್ಪತ್ತಿಯನ್ನುಂಟು ಮಾಡಲಾಗುತ್ತದೆ. ಆದ್ದರಿಂದ ಈ ವಾದ್ಯವನ್ನು 'ಸುಷಿರವಾದ್ಯ' ಎಂದು ಕರೆಯುತ್ತಾರೆ. 1

11. ಪಂಚಾಕ್ಷರಿ ಗವಾಯಿಗಳು ಶ್ರೀ ಕುಮಾರೇಶ್ವರ ಕೃಪಾಪೋಷಿತ ಸಂಗೀತ ಸಾಹಿತ್ಯ ವಿದ್ಯಾಲಯವನ್ನು ಸ್ಥಾಪಿಸಲು ಕಾರಣವೇನು ?

ಉತ್ತರ :

ಅಂಧ, ಅನಾಥ, ಅಂಗವಿಕಲ ಮತ್ತು ಬಡ ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ಸಂಗೀತ ಅಭ್ಯಾಸ ಮಾಡಿಸುವುದರ ಸಲುವಾಗಿ ಈ ವಿದ್ಯಾಲಯವನ್ನು ಸ್ಥಾಪಿಸಿದರು. 1

12. ಬಸವರಾಜ ರಾಜಗುರುರವರು ಯಾವ ಯಾವ ಘರಾಣೆಗಳಲ್ಲಿ ಸಾಧನೆಯನ್ನು ಮಾಡಿದರು ?

ಉತ್ತರ :

ಬಸವರಾಜ ರಾಜಗುರುರವರು ಗ್ವಾಲಿಯರ್, ಕಿರನಾ ಹಾಗೂ ಪಟಿಯಾಲಾ ಘರಾಣೆಗಳಲ್ಲಿ ಸಾಧನೆಯನ್ನು ಮಾಡಿದರು. 1

13. ಭೈರವ್ ರಾಗವನ್ನು ಉತ್ತರಾಂಗ ಪ್ರಧಾನರಾಗವೆಂದು ಕರೆಯಲು ಕಾರಣವೇನು ?

ಉತ್ತರ :

ಭೈರವ್ ರಾಗದ ವಾದಿಸ್ವರ ಕೋಮಲ ಧೈವತವು ರಾಗದ ಉತ್ತರಾಂಗದಲ್ಲಿ ಬರುತ್ತದೆ. ಆದ್ದರಿಂದ ಈ ರಾಗವನ್ನು ಉತ್ತರಾಂಗ ಪ್ರಧಾನ ರಾಗವೆಂದು ಕರೆಯುತ್ತಾರೆ. 1

14. ಕರ್ನಾಟಕ ಸಂಗೀತದ ಚಕ್ರವಾಕ ರಾಗವನ್ನು ಹಿಂದೂಸ್ಥಾನಿ ಸಂಗೀತದಲ್ಲಿ ಏನೆಂದು ಕರೆಯುತ್ತಾರೆ ?

ಉತ್ತರ :

ಕರ್ನಾಟಕ ಸಂಗೀತದ ಚಕ್ರವಾಕ ರಾಗವನ್ನು ಹಿಂದೂಸ್ಥಾನಿ ಸಂಗೀತದಲ್ಲಿ ಅಹೀರ್‌ಭೈರವ್ ರಾಗ ಎಂದು ಕರೆಯುತ್ತಾರೆ. 1

15. ಮಾಲ್‌ಕೌಂಸ್ ರಾಗವನ್ನು ಔಡವ–ಔಡವ ರಾಗ ಎಂದು ಕರೆಯಲು ಕಾರಣವೇನು ?

ಉತ್ತರ :

ಮಾಲ್‌ಕೌಂಸ್ ರಾಗದ ಆರೋಹಣ ಮತ್ತು ಅವರೋಹಣದಲ್ಲಿ ಐದೈದು ಸ್ವರಗಳು ಸಂಚಾರವಾಗುತ್ತದೆ. ಆದ್ದರಿಂದ ಈ ರಾಗವನ್ನು ಔಡವ–ಔಡವ ರಾಗ ಎಂದು ಕರೆಯುತ್ತಾರೆ. 1

16. ಜೀವನ್‌ಪುರಿ ರಾಗದ ಆರೋಹಣ ಮತ್ತು ಅವರೋಹಣದಲ್ಲಿ ಕಂಡುಬರುವ ಒಂದು ಮುಖ್ಯ ವ್ಯತ್ಯಾಸವನ್ನು ತಿಳಿಸಿ.

ಉತ್ತರ :

ಜೀವನ್‌ಪುರಿ ರಾಗದ ಆರೋಹಣ ರಿಷಭವು ವರ್ಜ್ಯವಾಗಿದೆ. ಅವರೋಹಣದಲ್ಲಿ ಸಂಪೂರ್ಣ ಸ್ವರಗಳಿವೆ. 1

III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** $7 \times 2 = 14$

17. ಕರ್ನಾಟಕ ಮತ್ತು ಹಿಂದೂಸ್ಥಾನಿ ಸಂಗೀತ ಪದ್ಧತಿಗಳೆರಡರಲ್ಲೂ ಕಂಡುಬರುವ ಎರಡು ಸಾಮ್ಯತೆಗಳನ್ನು ತಿಳಿಸಿ.

ಉತ್ತರ :

a) ಎರಡು ಸಂಗೀತ ಪದ್ಧತಿಗಳಿಗೂ ತಂಬೂರಿಯೇ ಶೃತಿವಾದ್ಯವಾಗಿದೆ.

b) ಎರಡು ಸಂಗೀತಗಳಿಗೆ ಸಪ್ತಸ್ವರಗಳೇ ಆಧಾರವಾಗಿದೆ.

c) ಮಂದ್ರ, ಮಧ್ಯೆ, ತಾರಾ ಸಪ್ತಕಗಳು ಎರಡು ಸಂಗೀತದಲ್ಲೂ ಬಳಕೆಯಲ್ಲಿದೆ. 2

18. ಸಂಗೀತಕ್ಕೆ ಲಿಪಿಯ ಅಗತ್ಯತೆ ಇದೆ. ಏಕೆ ?

ಉತ್ತರ :

ಸಂಗೀತವು ಕೂಡ ಒಂದು ಭಾಷೆ. ಇಲ್ಲಿ ಬೇರೆ ಬೇರೆ ಸ್ವರ, ರಾಗ ಮತ್ತು ತಾಳಗಳಿವೆ. ಬೇರೆ ಬೇರೆ ಗೀತಾರಚನೆಗಳಿವೆ. ಇವುಗಳನ್ನು ಗುರುತಿಸಬೇಕಾದರೆ ಸ್ವರ ಸಂಖ್ಯೆ, ಸ್ವರ ಚಿಹ್ನೆ, ಸ್ವರ ಸಂಕೇತ, ತಾಳ ಅಂಗ, ತಾಳ ಚಿಹ್ನೆಗಳ ಅಗತ್ಯತೆ ಇದೆ. ಹಾಗೆಯೇ ಮುಂದಿನ ಪೀಳಿಗೆಗೆ ಸಂಗೀತವನ್ನು ಉಳಿಸಿಡಬೇಕಾದರೆ ಸಂಗೀತಕ್ಕೆ ಲಿಪಿಯ ಅಗತ್ಯತೆ ಇದೆ. 2

19. ಸಂಗೀತವನ್ನು 'ಶ್ರವಣ ಸಾಧನ ವಿದ್ಯೆ' ಎಂದು ಕರೆಯಲು ಕಾರಣವೇನು ?

ಉತ್ತರ :

ಸಂಗೀತ ಕಲಿಕಾರ್ಥಿಗಳ ಪ್ರಾರಂಭಿಕ ಕೌಶಲವೇ ಆಲಿಸುವಿಕೆ. ಕಲಿಕಾರ್ಥಿಯು ಸಂಗೀತದ ಸ್ವರಗಳನ್ನು ಕೇವಲ ಶ್ರವಣೇಂದ್ರಿಯಗಳಿಂದ ಮಾತ್ರ ಗ್ರಹಿಸಬಹುದು. ಸಂಗೀತದಲ್ಲಿರುವ ಸೂಕ್ಷ್ಮ ಸ್ವರಗಳ ಗ್ರಹಿಕೆಯು ಕೂಡ ಆಲಿಸುವಿಕೆಗೆ ಸಂಬಂಧಿಸಿರುವುದರಿಂದ ಸಂಗೀತವನ್ನು ಶ್ರವಣ ಸಾಧನ ವಿದ್ಯೆ ಎಂದು ಕರೆಯಲಾಗಿದೆ. 2

20. ತಂತಿವಾದ್ಯಗಳು ಅವನದ್ಧ ವಾದ್ಯಗಳಿಗಿಂತ ಭಿನ್ನವಾಗಿವೆ. ಹೇಗೆ ?

ಉತ್ತರ :

ಚರ್ಮವನ್ನು ಬಳಸಿ ಮಾಡಲ್ಪಟ್ಟ ವಾದ್ಯಗಳೇ ಅವನದ್ಧ ವಾದ್ಯಗಳಾಗಿವೆ. ಈ ವಾದ್ಯಗಳನ್ನು ಸಾಮಾನ್ಯವಾಗಿ ಪಕ್ಕವಾದ್ಯಗಳಾಗಿ ಬಳಸುತ್ತಾರೆ. ಇವುಗಳಲ್ಲಿ ಸ್ವರಗಳನ್ನು ಉತ್ಪತ್ತಿ ಮಾಡಲಾಗುವುದಿಲ್ಲ. ಆದರೆ ತಂತಿ ವಾದ್ಯಗಳನ್ನು ತಂತಿ ಬಳಸಿ ಮಾಡಲಾಗಿರುತ್ತದೆ. ಈ ವಾದ್ಯಗಳಲ್ಲಿ ತಂತಿ ಮೀಟುವುದರ ಮೂಲಕ ಸ್ವರೋತ್ಪತ್ತಿಯನ್ನುಂಟು ಮಾಡಲಾಗುತ್ತದೆ. ಈ ವಾದ್ಯಗಳನ್ನು ಶೃತಿವಾದ್ಯವಾಗಿಯೂ, ಪಕ್ಕವಾದ್ಯವಾಗಿಯೂ ಹಾಗೂ ಸ್ವತಂತ್ರ ವಾದ್ಯವಾಗಿಯೂ ಬಳಸುವುದರಿಂದ ತಂತಿ ವಾದ್ಯಗಳು ಅವನದ್ಧ ವಾದ್ಯಗಳಿಗಿಂತ ಭಿನ್ನವಾಗಿವೆ. 2

21. ದಾದರಾ ತಾಳ ಮತ್ತು ಕೆಹರುವಾ ತಾಳಕ್ಕಿರುವ ವ್ಯತ್ಯಾಸವನ್ನು ಬರೆಯಿರಿ.

ಉತ್ತರ :

ದಾದರಾ		***ಕೆಹರುವಾ***	
i)	ಈ ತಾಳದಲ್ಲಿ ಆರು ಮಾತ್ರೆಗಳಿವೆ	i)	ಈ ತಾಳದಲ್ಲಿ 8 ಮಾತ್ರೆಗಳಿವೆ
ii)	ಈ ತಾಳದ 4ನೇ ಮಾತ್ರೆಯ ಮೇಲೆ ಹುಸಿಯನ್ನು ತೋರಿಸಲಾಗುತ್ತದೆ	ii)	ಈ ತಾಳದ 5ನೇ ಮಾತ್ರೆಯ ಮೇಲೆ ಹುಸಿಯನ್ನು ತೋರಿಸಲಾಗುತ್ತದೆ
iii)	ಈ ತಾಳದ ಖಂಡ 3, 3 ರಂತಿರುತ್ತದೆ	iii)	ಈ ತಾಳದ ಖಂಡ 4, 4 ರಂತಿರುತ್ತದೆ
iv)	ತಾಳದ ಠೇಕಾ ಧಾ ಧಿ ನಾ | ಧಾ ತಿ ನಾ ಎಂಬುದಾಗಿದೆ	iv)	ತಾಳದ ಠೇಕಾ ಧ ಗೆ ನ ತಿ | ನ ಕ ಧಿ ನ ಎಂಬುದಾಗಿದೆ

2

22. ಛೋಟಾ ಖಯಾಲ್ ಗಾಯನವು ಬಡಾ ಖಯಾಲ್ ಗಾಯನಕ್ಕಿಂತ ಭಿನ್ನವಾಗಿದೆ. ಹೇಗೆ ?

ಉತ್ತರ :

ಬಡಾ ಖಯಾಲ್ ಗಾಯನವು ವಿಲಂಬಿತ ಲಯದಲ್ಲಿ ಶುರುವಾಗುತ್ತದೆ. ಈ ರಚನೆಯು ಕಲಾವಿದನಿಗೆ ರಾಗದ ಮೇಲಿರುವ ಪ್ರಭುತ್ವ, ತಾಳದ ಮೇಲಿರುವ ಹಿಡಿತವನ್ನು ನಿರೂಪಿಸುತ್ತದೆ. ಆದರೆ ರಾಗ ವಿಸ್ತಾರಗೊಂಡ ನಂತರ ಧೃತ್ ಲಯದಲ್ಲಿ ಸಾಗುವ ಕಿರು ರಚನೆಯೇ ಛೋಟಾ ಖಯಾಲ್ ಆಗಿದೆ. ಈ ಗಾಯನದಲ್ಲಿ ತಾನ್‌ಗಳ ಸುರಿಮಳೆಯಾಗುತ್ತದೆ ತಾನ್ ಸ್ವರಮಾಲಿಕ, ಗಮಕ್ ಮುಂತಾದುದನ್ನು ಹಾಡಲು ಇದು ಪೂರಕವಾಗಿದೆ. ಆದ್ದರಿಂದ ಛೋಟಾ ಖಯಾಲ್ ಬಡಾ ಖಯಾಲ್‌ಗಿಂತ ಭಿನ್ನವಾಗಿದೆ. 2

23. ಈ ಕೆಳಗೆ ಕೊಟ್ಟಿರುವ ರಾಗಗಳಲ್ಲಿ ಥಾಟ್ ರಾಗ ಮತ್ತು ಔಡವ–ಸಂಪೂರ್ಣರಾಗಗಳ ರಾಗ ವರ್ಗೀಕರಣ ಮಾಡಿ ಬರೆಯಿರಿ.

(ಬಿಲಾವಲ್, ಕಾಫಿ, ಬಾಗೇಶ್ರೀ, ಭೀಮ್‌ಫಲಾಸ್)

ಉತ್ತರ :

ಥಾಟ್ ರಾಗ	***ಔಡವ ಸಂಪೂರ್ಣರಾಗ***
ಬಿಲಾವಲ್	ಬಾಗೇಶ್ರೀ
ಕಾಫಿ	ಭೀಮ್‌ಫಲಾಸ್

2

IV. **ಸಂಕ್ಷಿಪ್ತವಾಗಿ ಉತ್ತರಿಸುವುದು :**

24. ಹಿಂದೂಸ್ಥಾನಿ ಸಂಗೀತವು ಕರ್ನಾಟಕ ಸಂಗೀತಕ್ಕಿಂತ ಭಿನ್ನವಾಗಿದೆ. ಹೇಗೆ ? ವಿವರಿಸಿ.

ಉತ್ತರ :

ಹಿಂದೂಸ್ಥಾನಿ ಸಂಗೀತವು ಉತ್ತರ ಭಾರತದಲ್ಲಿ ಬೆಳೆದುಬಂತು. ಈ ಸಂಗೀತದಲ್ಲಿ ಬಳಕೆಯಾಗುವ ಖಯಾಲ್ ಪದ್ಧತಿ ಧ್ರುಪದ್, ಧಮಾರ್, ಠುಮ್ರಿ, ಟಪ್ಪ, ತರಾನಾ, ಘಜಲ್, ಭಜನ್ ಮೊದಲಾದ ಗೀತಾಪ್ರಕಾರಗಳು ಬ್ರಿಜ್ಜ್, ಹಿಂದಿ ಹಾಗೂ ಬೇರೆ ಬೇರೆ ಭಾಷೆಗಳಲ್ಲಿ ರಚನೆಗೊಂಡಿವೆ. ಈ ಸಂಗೀತದಲ್ಲಿ ಥಾಟ್ ರಾಗಗಳು ಮತ್ತು ರಾಗರಾಗಿಣಿ ರಾಗಗಳು ರೂಢಿಯಲ್ಲಿವೆ. ತಾಳಗಳಲ್ಲಿ ತ್ರಿತಾಲ್, ಚೌತಾಲ್, ಧೃತ್ ಏಕತಾಳ, ಝಪ್ತಾಳ ಮೊದಲಾದ ತಾಳಗಳು ರೂಢಿಯಲ್ಲಿವೆ. ಗಾಯನವು ತಬಲಾ ಸಾಥಿಯ ಮೂಲಕ ನಿರ್ವಹಿಸಲಾಗುತ್ತದೆ. ಇದು ಒಂದು ರಾಗ ಪ್ರಧಾನ ಸಂಗೀತವಾಗಿದ್ದು, ವಿಶ್ವದಲ್ಲೆಲ್ಲಾ ತನ್ನ ಸೌರಭವನ್ನು ಪಸರಿಸುವಲ್ಲಿ ಯಶಸ್ಸನ್ನು ಕಂಡಿದೆ. ಈ ಸಂಗೀತ ಪ್ರಕಾರದಲ್ಲಿ ಹನ್ನೆರಡು ಸ್ವರಗಳು ಮಾತ್ರ ರೂಢಿಯಲ್ಲಿದೆ. ಹತ್ತು ಥಾಟ್ ರಾಗಗಳು ರಚನೆಗೊಂಡಿದೆ. ಆದರೆ ಕರ್ನಾಟಕ ಸಂಗೀತವು ದಕ್ಷಿಣ ಭಾರತದಲ್ಲಿ ಬೆಳೆದು ಬಂತು. ಈ ಸಂಗೀತ ಪ್ರಕಾರದಲ್ಲಿ ಸಾಮಾನ್ಯವಾಗಿ ಕನ್ನಡ, ತೆಲುಗು, ತಮಿಳು, ಮಲಯಾಳಂ ಕೃತಿಗಳು ರೂಢಿಯಲ್ಲಿದ್ದು, ಇದು ಒಂದು ತಾಳ ಪ್ರಧಾನ ಸಂಗೀತವೆನಿಸಿಕೊಂಡಿದೆ. ಇಲ್ಲಿ 72 ಮೇಳಕರ್ತ ರಾಗಗಳು, ಸುಳಾದಿ ಸಪ್ತತಾಳಗಳು, ಸಾವಿರಾರು ಜನ್ಯರಾಗಗಳು ರೂಢಿಯಲ್ಲಿವೆ. ಒಟ್ಟಿನಲ್ಲಿ ಎರಡು ಸಂಗೀತ ಪ್ರಕಾರಗಳು ಒಂದೇ ನಾಣ್ಯದ ಎರಡು ಮುಖಗಳಂತಿದ್ದರೂ, ಒಂದಕ್ಕೊಂದು ಭಿನ್ನವಾಗಿರುವುದನ್ನು ಮೇಲಿನ ಅಂಶಗಳಿಂದ ಗಮನಿಸಬಹುದು. 4

25. ದುರ್ಗಾ ರಾಗದ ಸ್ವರಗೀತೆಯನ್ನು ಸ್ವರ ಪ್ರಸ್ತಾರದೊಂದಿಗೆ ಬರೆಯಿರಿ.

ಉತ್ತರ :

ದುರ್ಗಾರಾಗದ ಸ್ವರಗೀತೆ

ಸ್ಥಾಯಿ

0	3	×	2
ಧ – ಮ ಪ ಸ ರೆ ಮ ಪ	ಧ ಧ ಪ ಮ ದ ಸ ಧ ಪ	ಮ – ರೆ ಸ ಮ ಪ ಧ ಪ	ರೆ ಧ ಸ – ಮ ಮ ರೆ ಸ
ಅಂತರಾ			
0	3	×	2
ಧ ಮ ಪ ಧ ಧ ಸ ರೆ ಮ	ಸ ಧ ಸ – ರೆ ಸ ಧ ಸ	ಧ ಸ ರೆ ಸ ರೆ ಸ ಧ ಸ	ಧ ಪ ಮ – ಧ ಪ ಮ ಪ

6